# ಝಾನ್ಸೆ ಚಾನ್ಸ್

## ಸದಾ ಹೊಸತೆನಿಸುವ ಹಳೆಯ ಹಳ್ಳಿ



ಡಚ್‌ನ ಪಾರಂಪರಿಕ ಹಳ್ಳಿಗಳ ಪ್ರತಿರೂಪವಾದ 'ಝಾನ್ಸೆ ಚಾನ್ಸ್' ಬೃಹತ್ ಬಯಲು ಸಂಗ್ರಹಾಲಯದಂತಿದೆ. ಶತಮಾನಗಳಷ್ಟು ಹಳೆಯದಾದ ಕಟ್ಟಡಗಳು ಹಾಗೂ ಗಾಳಿಯಂತ್ರಗಳನ್ನು ಎಲ್ಲೆಲ್ಲಿಂದಲೋ ಕಳಚಿ ತಂದು ಇಲ್ಲಿ ಮರುಜೋಡಿಸಲಾಗಿದೆ. ಪ್ರತಿ ವರ್ಷವೂ ಈ ಊರಿನ ವ್ಯಾಪ್ತಿ–ವಿಶೇಷ ಹಿಗ್ಗುತ್ತಲೇ ಇದೆ.

■ ಕೆ.ಪಿ. ಸತ್ಯನಾರಾಯಣ

ಯುರೋಪಿನ ನೆದರ್ಲೆಂಡ್ ಅಥವಾ ಹಾಲೆಂಡ್‌ನ ಪ್ರವಾಸಿ ಆಕರ್ಷಣೆಗಳಲ್ಲೊಂದು 'ಝಾನ್ಸೆ ಚಾನ್ಸ್' (Zaanse Schans). 18–19ನೇ ಶತಮಾನದ ಟಿಪಿಕಲ್ ಡಚ್ ಹಳ್ಳಿಯ ಮರುನಿರ್ಮಾಣವಾದ 'ಝಾನ್ಸೆ ಚಾನ್ಸ್'ನಲ್ಲಿ ಝಾನ್ಸೆ ಪ್ರದೇಶದ ಚಾರಿತ್ರಿಕ, ಪಾರಂಪರಿಕ ಕುರುಹುಗಳನ್ನು ಕಾಣಬಹುದು.

ಉತ್ತರ ಹಾಲೆಂಡ್‌ನ ಜಾನ್‌ಸ್ಟಡ್ (Zaanstad) ಮುನಿಸಿಪಾಲಿಟಿಗೆ ಸೇರಿದ 'ಝಾನ್ಸೆ ಚಾನ್ಸ್' ಒಂದು ಬಯಲು ಸಂಗ್ರಹಾಲಯವೆಂದರೂ ತಪ್ಪಲ್ಲ. ಆಮ್‌ಸ್ಟರ್‌ಡ್ಯಾಂನಿಂದ 22 ಕಿ.ಮೀ. ದೂರದಲ್ಲಿ ಈ ಸ್ಥಳವಿದೆ.

ಇಪ್ಪತ್ತನೇ ಶತಮಾನದ ನಡುಭಾಗದಲ್ಲಿ ಒಂದಷ್ಟು ಮಂದಿ ಸಮಾನಮನಸ್ಕರು ತಮ್ಮ ದೇಶದ ಚಾರಿತ್ರಿಕ ಕಟ್ಟಡಗಳು ಮರೆಯಾಗುತ್ತಿರುವುದರ ಬಗ್ಗೆ ತೀವ್ರ ಕಳವಳ ಹೊಂದಿ, 'ಸ್ಟಿಚಿಂಗ್ ಝಾನ್ಸೆ ಚಾನ್ ಫೌಂಡೇಷನ್' ಸ್ಥಾಪಿಸಿದರು. ಝಾಂಡಂ ಎಂಬಲ್ಲಿನ ವಾಸ್ತುಶಿಲ್ಪಿ ಜಾಪ್ ಸ್ಚಿಪ್ಪರ್ (1947ರಲ್ಲಿ ವಾಸ್ತುಶಿಲ್ಪಕ್ಕಾಗಿರುವ ಪ್ರತಿಷ್ಠಿತ

